# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತನೆಯ ಅಧಿವೇಶನ

## ಲಘು ಪ್ರಕಟಣೆ ಭಾಗ–2

**(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**

**ಸೋಮವಾರ, ದಿನಾಂಕ:12ನೇ ಜೂನ್, 2023**

**ಸಂಖ್ಯೆ: 26**

### ವಿಧಾನ ಪರಿಷತ್ತಿನ ಅಧಿವೇಶನ ಪ್ರಾರಂಭದಲ್ಲಿ ಘನತೆವೆತ್ತ ರಾಜ್ಯಪಾಲರ ಭಾಷಣ

ಭಾರತ ಸಂವಿಧಾನದ 176ನೆಯ ಅನುಚ್ಛೇದದ (1)ನೆಯ ಖಂಡದಲ್ಲಿ ವಿಧಾಯಕವಾಗಿರುವಂತೆ ಬೆಂಗಳೂರಿನ ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ **2023ನೇ ಇಸವಿ ಜುಲೈ, 03ನೇ ಸೋಮವಾರ ಮಧ್ಯಾಹ್ನ 12.00 ಗಂಟೆಗೆ** ವಿಧಾನ ಮಂಡಲದ ಜಂಟಿ ಅಧಿವೇಶವನ್ನು ಉದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಭಾಷಣ ಮಾಡುತ್ತಾರೆಂಬುದನ್ನು ಮಾನ್ಯ ಸದಸ್ಯರುಗಳಿಗೆ ಈ ಮೂಲಕ ತಿಳಿಸಲಾಗಿದೆ.

ಘನತೆವೆತ್ತ ರಾಜ್ಯಪಾಲರು ಭಾಷಣವನ್ನು ಮುಕ್ತಾಯಗೊಳಿಸಿ ಸಭಾಂಗಣದಿಂದ ತೆರಳಿದ ನಂತರ ಸದಸ್ಯರು ನಿರ್ಗಮಿಸುತ್ತಾರೆ. ಜಂಟಿ ಅಧಿವೇಶನವು ಮುಕ್ತಾಯಗೊಂಡ ತರುವಾಯ ವಿಧಾನ ಪರಿಷತ್ತು ಪುನಃ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಸಭೆ ಸೇರುತ್ತದೆ.

**03ನೇ ಜುಲೈ, 2023ನೆಯ ಸೋಮವಾರದಂದು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಭಾಷಣ ಮಾಡುವ ಸಂದರ್ಭದಲ್ಲಿ ಅನುಸರಿಸಬೇಕಾದ ವಿಧಾನ:–**

ಘನತೆವೆತ್ತ ರಾಜ್ಯಪಾಲರು ಬೆಳಗ್ಗೆ **11.55 ಗಂಟೆಗೆ** ವಿಧಾನಸೌಧದ ಮಹಾದ್ವಾರದ ಮೆಟ್ಟಿಲುಗಳ ಬಳಿಗೆ ಆಗಮಿಸುವರು. ತಮ್ಮ ಕಾರಿನಿಂದ ಇಳಿದ ಬಳಿಕ ಘನತೆವೆತ್ತ ರಾಜ್ಯಪಾಲರನ್ನು ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರು ಮತ್ತು ವಿಧಾನ ಸಭೆಯ ಮಾನ್ಯ ಸಭಾಧ್ಯಕ್ಷರು, ವಿಧಾನ ಪರಿಷತ್ತಿನ ಮತ್ತು ವಿಧಾನ ಸಭೆಯ ಕಾರ್ಯದರ್ಶಿಗಳು ಸ್ವಾಗತಿಸಿ, ಮಹಾದ್ವಾರದಿಂದ ಕರೆದುಕೊಂಡು ಬರುವರು. ಅಲ್ಲಿ ಈ ಕೆಳಕಂಡ ಕ್ರಮದಲ್ಲಿ ಮೆರವಣಿಗೆಯನ್ನು ರೂಪಿಸಲಾಗುವುದು.

| | |
|---|---|
| ವಿಧಾನ ಸಭೆ, ಕಾರ್ಯದರ್ಶಿ | ವಿಧಾನ ಪರಿಷತ್ತಿನ, ಕಾರ್ಯದರ್ಶಿ |
| ಮಾನ್ಯ ಸಭಾಧ್ಯಕ್ಷರು<br>ವಿಧಾನ ಸಭೆ | ಮಾನ್ಯ ಸಭಾಪತಿಯವರು<br>ವಿಧಾನ ಪರಿಷತ್ತು |

ಘನತೆವೆತ್ತ ರಾಜ್ಯಪಾಲರು

| | |
|---|---|
| ಮಾನ್ಯ ಮುಖ್ಯಮಂತ್ರಿಯವರು | ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು<br>ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

ಎ.ಡಿ.ಸಿ.

..2

ಈ ಮೆರವಣಿಗೆಯು ವಿಧಾನ ಸಭೆಯ ಸಭಾಂಗಣದ ಕಡೆಗೆ ತಿರುಗುವುದು. ವಿಧಾನಸಭಾ ಸಭಾಂಗಣದ ದ್ವಾರದ ಬಳಿ ಮೆರವಣಿಗೆ ಬಂದ ಕೂಡಲೇ ಘನತೆವೆತ್ತ ರಾಜ್ಯಪಾಲರ ಆಗಮನವನ್ನು ಸಭೆಗೆ ದಂಡನಾಯಕರು ತಿಳಿಸುವರು. ಘನತೆವೆತ್ತ ರಾಜ್ಯಪಾಲರು ವೇದಿಕೆಯ ಮೇಲೆ ಕುಳಿತುಕೊಳ್ಳುವ ತನಕ ಮಾನ್ಯ ಸದಸ್ಯರುಗಳು ಎದ್ದು ನಿಂತಿರಬೇಕೆಂದು ಕೋರಲಾಗಿದೆ. ಮೆರವಣಿಗೆಯು ವೇದಿಕೆಯ ಕಡೆ ಮುಂದುವರೆಯುವುದು. ಸಭಾ ಭವನದ ವೇದಿಕೆಯ ಮುಂದೆ ಬಂದ ಬಳಿಕ ಮೆರವಣಿಗೆಯು ವಿಭಾಗವಾಗುವುದು. ಘನತೆವೆತ್ತ ರಾಜ್ಯಪಾಲರು ವೇದಿಕೆಯ ಮೇಲೆ ಬಂದು ತಮ್ಮ ಆಸನವನ್ನು ತಲುಪಿದ ಕೂಡಲೇ ರಾಷ್ಟ್ರಗೀತೆಯನ್ನು ನುಡಿಸಲಾಗುವುದು. ವೇದಿಕೆಯ ಮೇಲೆ ಘನತೆವೆತ್ತ ರಾಜ್ಯಪಾಲರ ಎಡಭಾಗದಲ್ಲಿ ಮಾನ್ಯ ಸಭಾಪತಿಯರು ಹಾಗೂ ಬಲ ಭಾಗದಲ್ಲಿ ಮಾನ್ಯ ಸಭಾಧ್ಯಕ್ಷರು ಕುಳಿತುಕೊಳ್ಳುವರು. ಘನತೆವೆತ್ತ ರಾಜ್ಯಪಾಲರು ಮಧ್ಯದಲ್ಲಿರುವ ಆಸನದಲ್ಲಿ ಕುಳಿತುಕೊಳ್ಳುವರು. ಕಾರ್ಯದರ್ಶಿಗಳು ವೇದಿಕೆ ಮುಂದುಗಡೆ ಇರುವ ಆಸನಗಳಲ್ಲಿ ಕುಳಿತುಕೊಳ್ಳುವರು. "ರಾಜ್ಯಪಾಲರು ಬರುವಾಗ ಅಥವಾ ಹೊರಡುವಾಗ ಅಥವಾ ಅವರ ಭಾಷಣದ ಅವಧಿಯಲ್ಲಿ ಯಾರೇ ಸದಸ್ಯರು ಯಾವುದೇ ಭಾಷಣ ಮಾಡುವ ಮೂಲಕ ಅಥವಾ ಯಾವುದೇ ಕ್ರಿಯಾಲೋಪವೆತ್ತಿ ರಾಜ್ಯಪಾಲರ ಭಾಷಣಕ್ಕೆ ಮುಂಚೆಯಾಗಲಿ ಅಥವಾ ತರುವಾಯವಾಗಲಿ ಸಭಾತ್ಯಾಗ ಮಾಡುವುದು ಅಥವಾ ವಿಘ್ನವನ್ನುಂಟು ಮಾಡದಿರುವುದು ಸಂಪ್ರದಾಯವಾಗಿದೆ."

ಭಾಷಣದ ನಂತರ ರಾಷ್ಟ್ರಗೀತೆಯನ್ನು ಪುನಃ ನುಡಿಸಲಾಗುವುದು.

ಘನತೆವೆತ್ತ ರಾಜ್ಯಪಾಲರು ಮೆರವಣಿಗೆಯಲ್ಲಿ ಸಭಾಂಗಣವನ್ನು ಪ್ರವೇಶಿಸಿದ ರೀತಿಯಲ್ಲಿಯೇ ಸಭಾಂಗಣದಿಂದ ತೆರಳುವರು. ಮೆರವಣಿಗೆಯು ಮಹಾದ್ವಾರದ ಬಳಿ ಮುಕ್ತಾಯವಾಗುವುದು. ನಂತರ ಮಾನ್ಯ ಸಭಾಪತಿಯವರು, ಮಾನ್ಯ ಸಭಾಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಘನತೆವೆತ್ತ ರಾಜ್ಯಪಾಲರನ್ನು ಬೀಳ್ಕೊಡುವರು. ಘನತೆವೆತ್ತ ರಾಜ್ಯಪಾಲರು ಸಭಾಂಗಣದಿಂದ ಹೊರಗೆ ತೆರಳುವವರೆಗೆ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತಿರಬೇಕು.

**ರಾಜ್ಯಪಾಲರ ಭಾಷಣಕ್ಕೆ ಕೃತಜ್ಞತಾ ಸೂಚನೆಯ ಪ್ರಸ್ತಾವ ಮತ್ತು ಅದಕ್ಕೆ ಸಂಬಂಧಿಸಿದ ತಿದ್ದುಪಡಿಗಳು**

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿಯ ನಿಯಮಗಳು 19 ಮತ್ತು 20ರಲ್ಲಿ ಸದಸ್ಯರೊಬ್ಬರು ಮತ್ತೊಬ್ಬ ಸದಸ್ಯರಿಂದ ಅನುಮೋದಿಸಲ್ಪಟ್ಟ ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಕೃತಜ್ಞತಾ ಸೂಚನೆಯ ಪ್ರಸ್ತಾವವನ್ನು ಮಂಡಿಸುವ ಅವಕಾಶವಿದೆ. ಆದುದರಿಂದ, ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣಕ್ಕಾಗಿ ಅವರಿಗೆ ಸಮರ್ಪಿಸುವ ಕೃತಜ್ಞತಾ ಸೂಚನೆಯ ಪ್ರಸ್ತಾವದ ಸೂಚನೆಯನ್ನು 2023ನೇ ಇಸವಿಯ ಜುಲೈ, 03 ರಂದು ಸೋಮವಾರ ಮಧ್ಯಾಹ್ನ 03.00 ಗಂಟೆಯವರೆಗೂ ಮತ್ತು ಆ ಪ್ರಸ್ತಾವಕ್ಕೆ ಸಂಬಂಧಿಸಿದ ತಿದ್ದುಪಡಿಗಳ ಸೂಚನೆಯನ್ನು 2023ನೇ ಇಸವಿಯ ಜುಲೈ, 06ರಂದು ಗುರುವಾರ ಬೆಳಗ್ಗೆ 10.30 ಗಂಟೆಯವರೆವಿಗೂ ಕೊಡಬಹುದೆಂದು ಮಾನ್ಯ ಸಭಾಪತಿಯವರು ಗೊತ್ತುಪಡಿಸಿರುತ್ತಾರೆ.

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ.

**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ**

# KARNATAKA LEGISLATIVE COUNCIL

## HUNDRED AND FIFTYTH SESSION

## BULLETIN PART – II

(General information relating to Parliamentary and other matters)

**Monday, the 12th June, 2023**

No: 26

### ADDRESS BY HIS EXCELLENCY THE GOVERNOR AT THE COMMENCEMENT OF THE SESSION.

Hon'ble Members are hereby informed that as required by Clause (1) of Article 176 of the Constitution, His Excellency the Governor will address Joint Session of Karnataka Legislature assembled in the Legislative Assembly Chamber, Vidhana Soudha, Bengaluru at 12.00 Noon on Monday, the 03rd July, 2023.

As soon as His Excellency the Governor concludes the Address and leaves the Chamber, the Members will disperse. After the Joint Session, the Legislative Council will again meet at the Legislative Council Chamber.

**PROCEDURE TO BE OBSERVED BY MEMBERS OF KARNATAKA LEGISLATIVE COUNCIL AND KARNATAKA LEGISLATIVE ASSEMBLY ON MONDAY THE 03rd July, 2023.**

His Excellency the Governor will arrive at the grand steps of the main entrance to the Vidhana Soudha at 11.55 A.M On alighting from the car, Governor will be received by Hon'ble Chairman, Hon'ble Speaker, the Secretary Karnataka Legislative Council and the Secretary, Karnataka Legislative Assembly.

At the main entrance a procession will be formed in the following order:-

| | |
|---|---|
| **Secretary**<br>**Legislative Assembly** | **Secretary**<br>**Legislative Council** |
| **Hon'ble Speaker**<br>**Legislative Assembly** | **Hon'ble Chairman**<br>**Legislative Council** |

**His Excellency the Governor**

| | |
|---|---|
| **Hon'ble Chief Minister** | **Hon'ble Minister for Law & Parliamentary Affairs and Legislation and Tourism** |

**A.D.C**

The procession in this form will proceed to the Legislative Assembly Chamber. The Marshal announces the arrival of His Excellency the Governor. Hon'ble Members are requested to remain standing until His Excellency the Governor takes the seat on the dais. The procession will proceed towards the dais. On reaching the Floor of the House in front of the dais, the procession bifurcates. On reaching the dais and before His Excellency the Governor takes the seat, National Anthem will be played. On the dais, the Hon'ble Chairman will sit on the Governor's left and Hon'ble Speaker on the right. His Excellency the Governor occupies the central seat. The Secretaries take their seats in front of the dais.

His Excellency the Governor will then read the address. It is a convention that no member shall obstruct or interrupt the Address either before or after the Address or during its duration with any speech, point of order, walk-out at in any other manner.

The National Anthem will again be played after the conclusion of the address.

His Excellency Governor will leave the Chamber in procession in the same order in which the procession entered the Chamber. The procession will reach the main entrance and the Governor will be seen off by the Hon'ble Chairman, Hon'ble Speaker and Secretaries.

All the Hon'ble Members will raise and remain standing until His Excellency the Governor proceeds and leaves the Chamber.

## GOVERNOR'S ADDRESS-MOTION OF THANKS AND AMENDMENTS THERETO

Rules 19 and 20 of the Rules of Procedure and Conduct of Business in the Karnataka Legislative Council provide for a Motion of Thanks to the Governor's Address being moved by a member and seconded by another member. The Hon'ble Chairman has been pleased to fix 03.00 P.M. on Monday, the 03rd July, 2023 as the last hour and date for receipt of a Notice of the Motion of Thanks and 10.30 A.M. on Thursday, the 6th July, 2023 as the last hour and date for receipt of the amendments thereto.

**K.R. MAHALAKSHMI**
Secretary

To:

**All the Members of Karnataka Legislative Council.**

**www.kla.kar.nic.in/council/council.htm**